– –                                                  ಓ.ಎಸ್.ನಂ.312/2022

ಡಿ ಡಬ್ಲ್ಯೂ: 1

ದಿನಾಂಕ 05–03–2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

ನಾನು ಹಾಜರು ಪಡಿಸಿರುವ ವಂಶವೃಕ್ಷದ ಮಾಹಿತಿ ಸರಿ ಇರುತ್ತದೆ. ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನಮ್ಮ ತಂದೆ ತಾಯಿ ಮರಣದ ನಂತರ ನಾವು ಮತ್ತು ವಾದಿಗಳು ನಮ್ಮ ಜಂಟಿ ಹೆಸರಿನಲ್ಲಿ ಖಾತೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಮ್ಮ ತಂದೆ ತಾಯಿ ಜೀವಂತ ಕಾಲದಲ್ಲಿ ಯಾವುದೇ ದಾನ ಪತ್ರ ಅಥವಾ ಯಾವುದೇ ದಾಖಲೆಗಳನ್ನು ಬರೆದಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಮಗೆ ಮತ್ತು ವಾದಿಗೆ ಸಮಾನ ಹಿಸ್ಸಾ ಇದೆ ಎಂದರೆ ಸರಿ.

**2.** ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸುವ ಬಗ್ಗೆ ವಾದಿಗೆ ನಮ್ಮ ತಾಯಿ ಮರಣ ಹೊಂದಿದ 2–3 ವರ್ಷಗಳಲ್ಲಿ ಕರೆದಿರುತ್ತೇವೆ. ಆ ಸಮಯದಲ್ಲಿ ಆಕೆಯು ನಮ್ಮ ಜೊತೆ ಅನ್ಯೋನ್ಯವಾಗಿದ್ದಳು ಎಂದರೆ ಸರಿ. ಮನೆ ಕಟ್ಟುವ ಸಮಯದಲ್ಲಿ ಯಾವುದೇ ಪಾಲು ವಿಭಾಗ ಮಾಡಿಕೊಂಡಿರುವುದಿಲ್ಲ ಆದರೆ ಆಕೆಯ ಪಾಲಿಗೆ ಆಸ್ತಿ ಬಿಟ್ಟು ಕಟ್ಟಿಕೊಂಡಿರುತ್ತೇವೆ. ಆ ಕುರಿತು ಪಂಚಾಯತಿ ಯಾರ ಸಮಕ್ಷಮ ಆಗಿರುತ್ತದೆ ಎಂದು ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿ ಬರೆಸಿರುವುದಿಲ್ಲ. ಸದರಿ ಪಂಚಾಯತಿಯ ಬಗ್ಗೆ ಯಾವುದೇ ಪತ್ರ ವ್ಯವಹಾರ ಆಗಿರುವುದಿಲ್ಲ. ಮನೆ ಕಟ್ಟಿಕೊಳ್ಳುವ ಕುರಿತು ವಾದಿ ಯಾವುದೇ ಒಪ್ಪಿಗೆ ಪತ್ರ ಬರೆದುಕೊಟ್ಟಿರುವುದಿಲ್ಲ.

**3.** ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸುವ ಬಗ್ಗೆ ವಾದಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿ ಹಿಸ್ಸಾ ನೀಡಬಾರದು ಎಂದು ಆಕೆಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ನಿರ್ಮಾಣದ ಕುರಿತು ಯಾವುದೇ ಸಾಲ ಮಾಡಿರುವುದಿಲ್ಲ ಆದರೆ ಸರ್ಕಾರವೆ ಕಟ್ಟಿ ಕೊಟ್ಟಿರುತ್ತದೆ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.                                    ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.                                    ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.